India Media Monitor

# Vijayavani

## Equalise number of UG,PG medical seats

**Date: 30/07/2013 | Edition: Bangalore | Page: 2 | Source: Bureau | Clip size (cm): W: 20 H: 12**

Clip: 1 of 1

# ವೈದ್ಯಕೀಯ ಪಿಜಿ ಸೀಟು ಹೆಚ್ಚಿಸಿ

## ‘ಸೇವ್ ಡಾಕ್ಟರ್’ ಅಭಿಯಾನಕ್ಕೆ ಹೃದ್ರೋಗ ತಜ್ಞ ದೇವಿ ಶೆಟ್ಟಿ ಚಾಲನೆ

**ಬೆಂಗಳೂರು:** ಸ್ನಾತಕೋತ್ತರ ವೈದ್ಯಕೀಯ ಸೀಟುಗಳ ಸಂಖ್ಯೆ ಹೆಚ್ಚಿಸದೇ ಹೋದಲ್ಲಿ ತಜ್ಞ ವೈದ್ಯರ ಕೊರತೆ ಕಾಡಲಿದೆ ಖ್ಯಾತ ಹೃದ್ರೋಗ ತಜ್ಞ ಹಾಗೂ ಆರೋಗ್ಯ ಸೇವೆ ಪೂರೈಕೆದಾರರ ಒಕ್ಕೂಟದ (ಎಎಚ್‌ಪಿಐ) ಖಜಾಂಚಿ ಡಾ. ದೇವಿಶೆಟ್ಟಿ ಎಚ್ಚರಿಸಿದ್ದಾರೆ.

ಎಎಚ್‌ಪಿಐ, ಭಾರತೀಯ ವೈದ್ಯಕೀಯ ಸಂಘ, ಪಿಜಿ ಸೀಟುಗಳನ್ನು ಹೆಚ್ಚಿಸಬೇಕು ಎಂಬ ಬೇಡಿಕೆಯನ್ನಿಟ್ಟುಕೊಂಡು ಸೋಮವಾರ ಆರಂಭಿಸಿರುವ ‘ಸೇವ್ ಡಾಕ್ಟರ್’ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದರು.

ಸದ್ಯ ಇರುವ ಹಿರಿಯ ತಜ್ಞ ವೈದ್ಯರು, ಸರ್ಜನ್‌ಗಳು ನಿವೃತ್ತಿ ಹೊಂದುವ ಹಂತದಲ್ಲಿದ್ದು, ಯುಜಿ–ಪಿಜಿಸೀಟುಗಳಲ್ಲಿನ ಅಪಾರ ವ್ಯತ್ಯಾಸದಿಂದಾಗಿ ಭವಿಷ್ಯದಲ್ಲಿ ತಜ್ಞ ವೈದ್ಯರ ಕೊರತೆಯುಂಟಾಗುವ ಸಾಧ್ಯತೆ ಇದೆ ಎಂದರು.

ದೇಶದಲ್ಲಿ ಸದ್ಯ 2000 ಮಂದಿಗೆ ಒಬ್ಬ ವೈದ್ಯರಿದ್ದಾರೆ. ನಮ್ಮಲ್ಲಿ ವೈದ್ಯಕೀಯ ಸೇವೆ ನೀಡುವ ಸಾಕಷ್ಟು ಸಂಸ್ಥೆಗಳಿವೆ. ಆದರೆ



ಪಿಜಿ ಸೀಟುಗಳನ್ನು ಹೆಚ್ಚಿಸಬೇಕು ಎಂಬ ಬೇಡಿಕೆಯನ್ನಿಟ್ಟುಕೊಂಡು ಸೋಮವಾರ ಆರಂಭಿಸಿರುವ ‘ಸೇವ್ ಡಾಕ್ಟರ್’ ಎಂಬ ಅಭಿಯಾನಕ್ಕೆ ಚಾಲನೆ ನೀಡಿದ ಆರೋಗ್ಯ ಸೇವೆ ಪೂರೈಕೆದಾರರ ಒಕ್ಕೂಟದ ಖಜಾಂಚಿ ಡಾ. ದೇವಿಶೆಟ್ಟಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ವಿಶೇಷ ತಜ್ಞ ವೈದ್ಯರ ಕೊರತೆಯಿದೆ. ಪ್ರತಿ ವರ್ಷ ದೇಶದಲ್ಲಿ 45 ಸಾವಿರ ವಿದ್ಯಾರ್ಥಿಗಳು ಎಂಬಿಬಿಎಸ್ ಪದವಿ ಮುಗಿಸಿ ಹೊರಬರುತ್ತಿದ್ದಾರೆ. ಆದರೆ ಅವರು ಉನ್ನತ ವಿದ್ಯಾಭ್ಯಾಸಕ್ಕಾಗಿ ಸೀಟು ಪಡೆಯಲು ಹರಸಾಹಸ ಪಡುತ್ತಿರುವುದು ಸೋಜಿಗ ಎಂದರು.

ಪಿಜಿಯಲ್ಲಿ 12 ಸಾವಿರ ಸೀಟುಗಳಿವೆ. ಇದರಿಂದಾಗಿ ಯುಜಿಯ 45 ಸಾವಿರ ವಿದ್ಯಾರ್ಥಿಗಳ ಪೈಕಿ ಹೆಚ್ಚಿನ ವಿದ್ಯಾರ್ಥಿಗಳು ಉನ್ನತ ಶಿಕ್ಷಣದಿಂದ ವಂಚಿತರಾಗುತ್ತಿದ್ದಾರೆ ಎಂದು ಆತಂಕ ವ್ಯಕ್ತಪಡಿಸಿದರು. ಕಡ್ಡಾಯ 1 ವರ್ಷದ ಗ್ರಾಮೀಣ ವೈದ್ಯಕೀಯ ಸೇವೆಯನ್ನು ಯುಜಿ ಮತ್ತು ಪಿಜಿ ಅಧ್ಯಯನದ ಅವಧಿಯೊಳಗೆ ಸೇರಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಸೇವ್ ಡಾಕ್ಟರ್ ಅಭಿಯಾನದಲ್ಲಿ ವೈದ್ಯ ಕಾಲೇಜುಗಳ ವಿದ್ಯಾರ್ಥಿಗಳು, ಎಎಚ್‌ಪಿಐ ಸಂಸ್ಥೆಯ ಪದಾಧಿಕಾರಿಗಳು ಪಾಲ್ಗೊಂಡಿದ್ದರು.